# AKKAMAHADEVI WOMEN'S UNIVERSITY, VIJAYAPURA

……………………………………………………………………

**DATE: 21-02-2018**

**ಪ್ರಕಟಣೆಯ ಕೃಪೆಗಾಗಿ…………**

ವಿಜಯಪುರ: ಅಭಿವೃದ್ಧಿ ಪತ್ರಿಕೋದ್ಯಮ ಇಂದು ಜೀವಂತವಾಗಿದೆ ಎಂದರೆ ಅದಕ್ಕೆ ಪ್ರಮುಖ ಕಾರಣ ಜಿಲ್ಲಾ, ತಾಲೂಕು ಮತ್ತು ಗ್ರಾಮೀಣ ವರದಿಗಾರರೇ ಎಂದು ಕಲಬುರಗಿ 'ದಿ ಹಿಂದು' ಪತ್ರಿಕೆಯ ಸುದ್ದಿ ವಿಭಾಗದ ಮುಖ್ಯಸ್ಥ ಟಿ.ವಿ.ಶಿವಾನಂದ ಅಭಿಪ್ರಾಯಪಟ್ಟರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮಾಧ್ಯಮ ಮನೆ ಚಟುವಟಿಕೆಯಡಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಅಭಿವೃದ್ದಿ ವರದಿಗಾರಿಕೆಯ ತಂತ್ರಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ದಿನಮಾನಗಳಲ್ಲಿ ಸುದ್ದಿಯನ್ನು ನೋಡುವ ದೃಷ್ಟಿಕೋನ ಬದಲಾಗಬೇಕಾಗಿದೆ. ಇಲ್ಲವಾದಲ್ಲಿ ಅಭಿವೃದ್ಧಿ ವರದಿಗಳು ಒಂದು ಅಥವಾ ಎರಡು ಕಾಲಂ ಸುದ್ದಿಯಾಗಿಯೇ ಉಳಿದುಬಿಡುತ್ತವೆ ಎಂದು ಅವರು ಎಚ್ಚರಿಸಿದರು.

ಅಭಿವೃದ್ಧಿಯ ವರದಿಗಳನ್ನು ಮಾಡಬೇಕಾದಾಗ ಮೊದಲು ಆ ವಿಷಯಗಳ ಕುರಿತು ಸಂಪೂರ್ಣ ಮಾಹಿತಿ ಪಡೆದುಕೊಂಡಿರಬೇಕು. ಆದರೆ ಕೇವಲ ಕಚೇರಿಯಲ್ಲಿ ಕುಳಿತು ಎಲ್ಲ ಮಾಹಿತಿ ಇದ್ದರೂ ಸಹ ಒಂದು ಪರಿಣಾಮಕಾರಿ ಅಭಿವೃದ್ಧಿ ವರದಿಯನ್ನು ಬರೆಯಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಜನರ ಮಧ್ಯೆ ಹೋಗಿ ಅವರ ಅಭಿಪ್ರಾಯಗಳನ್ನು ಪಡೆಯುವುದು, ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗುವುದು ಅತ್ಯವಶ್ಯಕ ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ನೀವು ಒಂದು ಕಥೆ ಅಥವಾ ಯೋಜನೆ ಬಗ್ಗೆ  ಬರೆಯಬೇಕಾದರೆ ಅಲ್ಲಿಗೆ ಹೋಗಿ ಭೇಟಿ ನೀಡಬೇಕು. ಒಂದು ಶಾಲೆಯಲ್ಲಿರುವ ಸಣ್ಣ ಹುಡುಗರ ಜೊತೆ ಆ ಶಾಲೆಯ ಬಗ್ಗೆ ಕೇಳಿ ತಿಳಿದುಕೊಳ್ಳಬೇಕು. ಅವರು ಹೇಳಿದ್ದನ್ನು ಬರೆದುಕೊಂಡು ಹೋದರೆ ಅದೇ ನಿಮ್ಮ ದೊಡ್ಡ ಯೋಜನೆಯಾಗುತ್ತದೆ. ಇದೇ ಸಕಾರಾತ್ಮಕ ಪತ್ರಿಕೋದ್ಯಮ ಎಂದು ತಮ್ಮ ವೃತ್ತಿ ಅನುಭವವನ್ನು ಮೆಲುಕು ಹಾಕಿದರು.

ಅಭಿವೃದ್ಧಿ ವರದಿಗೆ ಮುಖ್ಯವಾಗಿ ಕಣ್ಣು, ಕಿವಿ ಚುರುಕಾಗಿರಬೇಕು. ಅದರಿಂದ ಎಷ್ಟು ಜನಕ್ಕೆ ಒಳ್ಳೆಯದಾಗುತ್ತದೆ ಅದನ್ನು ಅರಿತು ಆ ಯೋಜನೆಯತ್ತ ಕೈ ಹಾಕುವುದು ಒಳ್ಳೆಯದು. ನಾವು ಬರೆಯುವುದು ಹಳ್ಳಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾಗಿ ಮತ್ತು ಸ್ಪಷ್ಟವಾಗಿರಬೇಕು. ಅಂದಾಗ ಮಾತ್ರ ಒಂದು ಉತ್ತಮ ಅಭಿವೃದ್ಧಿ ವರದಿ ಮಾಡಲು ಸಾಧ್ಯ ಎಂದು ಸಲಹೆ ನೀಡಿದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿನಿ ಭಾಗ್ಯಶ್ರೀ ಕದಂ ನಿರೂಪಿಸಿದರು. ವಿದ್ಯಾಶ್ರೀ ಹೊಸಮನಿ ವಂದಿಸಿದರು.

//////**ಫೋಟೋ ಕ್ಯಾಪ್ಷನ್**///////

1) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮಾಧ್ಯಮ ಮನೆ ಚಟುವಟಿಕೆಯಡಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಅಭಿವೃದ್ದಿ ವರದಿಗಾರಿಕೆಯ ತಂತ್ರಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕಲಬುರಗಿ 'ದಿ ಹಿಂದು' ಪತ್ರಿಕೆಯ ಸುದ್ದಿ ವಿಭಾಗದ ಮುಖ್ಯಸ್ಥ ಟಿ.ವಿ.ಶಿವಾನಂದ ಮಾತನಾಡಿದರು.

